# ‘ಇರುಳು ಕರಗುತ್ತಿದೆ’

ನಿನ್ನೆ ಸಂಜೆ ಸುರಿದ ಮಳೆಯಿಂದ ಕುದಿದು ಹಬೆಯಾಡುತ್ತಿದ್ದ ಸೆಖೆ-ಸೆಖೆಯ ಮಧ್ಯರಾತ್ರಿಯಲ್ಲಿ ಓದುತ್ತ ಕುಳಿತಿದ್ದಾಗ ಕೇಳಿಸಿಕೊಳ್ಳುತ್ತಿದ್ದ ಹಾಡು, ಲತಾ ಮಂಗೇಶ್ಕರ್ ಹಾಡಿದ ‘ರೈನಾ ಬೀತಿ ಜಾಯೇ, ಶ್ಯಾಮ್ ನ ಆಯೆ’. ಸುಲಭಕ್ಕೆ ಸದ್ದಡಗದ ಈ ಮಹಾನಗರಿಯ ಸದ್ದುಗದ್ದಲವೆಲ್ಲ ತಣ್ಣಗಾದ ಮೇಲೆ, ರಾತ್ರಿಯ ನೀರವ ಮೌನದಲ್ಲಿ ಲತಾ, ಆಶಾ, ಕಿಶೋರ್, ಗೀತಾದತ್ (ರಾಜ್‌ಕುಮಾರ್, ಪಿ.ಬಿ.ಎಸ್, ಪಿ. ಸುಶೀಲ) ಹಾಡಿದ ಕೆಲವು ಏಕವ್ಯಕ್ತಿ ಗೀತೆಗಳನ್ನು ಕೇಳಿಸಿಕೊಳ್ಳಿ, ಮನಸ್ಸು ದಿನದೆಲ್ಲ ಒತ್ತಡಗಳನ್ನು ಕಳೆದುಕೊಂಡು ಹಗುರಾಗುತ್ತದೆ, ಪ್ರಫುಲ್ಲಗೊಳ್ಳುತ್ತದೆ; ದಿನವಿಡೀ ತಲೆಯೊಳಗೆ ಖಣಖಣಿಸುತ್ತಿದ್ದ ಎಲ್ಲ ಯೋಚನೆಗಳ ಸೆರೆವಾಸದ ಕಡಿವಾಣಗಳೂ ಕಳಚಿಬಿದ್ದು ತಲೆ ಸ್ವತಂತ್ರವಾಗುತ್ತದೆ, ಸ್ವಚ್ಛಂದವಾಗುತ್ತದೆ; ಎದೆ ನಿಟ್ಟುಸಿರಾಗಿ ನಿರಾಳವಾಗುತ್ತದೆ; ಆ ನಂತರ ಹಾಸಿಗೆಯ ಮೇಲುರುಳಿದರೆ ಕಣ್ಣಿಗೆ ಮಗುವಿನ ನಿದ್ರೆ! ಮತ್ತು ಮೈಮನವೆಲ್ಲ ಸಿಹಿಗನಸಿನ ಬಾನಂಗಳಕ್ಕೇರುವ ಪಾತರಗಿತ್ತಿ!

**ರೈನಾ ಬೀತೀ ಜಾಯೇ, ಶಾಮ್ ನ ಆಯೇ,**
**ನಿಂದಿಯಾ ನ ಆಯೇ, ನಿಂದಿಯಾ ನ ಆಯೇ,**

ಇರುಳು ಕರಗುತ್ತಿದೆ, ಶ್ಯಾಮ ಬರಲಿಲ್ಲವೇಕೆ? (ಹಾಳಾದ್ದು) ಈ ನಿದ್ದೆಯೂ ಬರದೊಲ್ಲದೇಕೆ?

**ಶಾಮ್ ಕೋ ಭೂಲಾ, ಶಾಮ್ ಕಾ ವಾದಾ,**
**ಸಂಗ್ ದಿಯೇ ಕೆ ಜಾಗೇ ರಾಧಾ, ನಿಂದಿಯಾ ನ ಆಯೇ**

ಸಂಜೆಯ ಮಾತನ್ನು ಶ್ಯಾಮ ಮರೆತು ಬಿಟ್ಟನೇನೋ, (ಪಾಪ) ದೀಪದೊಂದಿಗೆ ಉರಿದುಹೋಗುತ್ತಿದ್ದಾಳೆ, ರಾಧೆ ಅವನ ದಾರಿ ಕಾದು. ಈ ನಿದ್ದೆಯೂ ಬರದೊಲ್ಲದೇಕೆ?

**ಕಿಸ್ ಸೌತನ್ ನೇ ರೋಕಿ ಡಗರಿಯಾ,**
**ಕಿಸ್ ಬೈರನ್ ಕೇ ಲಾಗೀ ನಜರಿಯಾ, ನಿಂದಿಯಾ ನ ಆಯೇ**

ಯಾವ (ನನ್ನ) ಸವತಿ ಅವನ ದಾರಿ ತಡೆದಳೋ, (ನನ್ನ) ಯಾವ ಶತ್ರುವಿನ ದೃಷ್ಟಿ ತಾಕಿತೋ, ಶ್ಯಾಮ ಬರಲಿಲ್ಲವಲ್ಲ, ಈ ನಿದ್ದೆಯೂ ಬರದೊಲ್ಲದೇಕೆ?

**ಬಿರಹಾಕಿ ಮಾರಿ, ಪ್ರೇಮ್ ದಿವಾನಿ,**
**ತನ್‌ಮನ್ ಪ್ಯಾಸಾ, ಅಖಿಯೋಂ ಮೇ ಪಾನಿ, ನಿಂದಿಯಾ ನ ಆಯೇ**

(ಶ್ಯಾಮ ಬಾರದ ದಾರಿ ಕಾಯುತ್ತಿದ್ದಾಳೆ, ರಾಧೆ), ವಿರಹದಿಂದ ತಪ್ತಳಾಗಿ, ಅವನ ಪ್ರೇಮದಲ್ಲಿ ಹುಚ್ಚಿಯಾಗಿ ತೀರದ ತನು ಮನಗಳ ದಾಹದೊಂದಿಗೆ, ಕಣ್ದುಂಬಿಕೊಂಡು, (ಹಾಳಾದ್ದು) ಈ ನಿದ್ದೆಯೂ ಬರದೊಲ್ಲದೇಕೆ?

ಹೇಗಿದೆ ಹಾಡು? ನಡುರಾತ್ರಿಗಳಲ್ಲಿ ಈ ಹಾಡುಗಳನ್ನು ಕೇಳುತ್ತ ಕುಳಿತರೆ ಇದು ಬರೀ ಹಾಡಲ್ಲ, ಇದರದ್ದು ಬರೀ ಒಣ ಸಾಹಿತ್ಯವಲ್ಲ, ಯಾರದೋ ಚಿರವಿರಹಿ ಮನಸು ಅನಂತಾನಂತಕ್ಕೂ ಹಾಡಿಕೊಳ್ಳುತ್ತಿರುವ ಗಂಧರ್ವಗಾನವಿದು ಎನಿಸುತ್ತದೆ.  ಈ ಹಾಡಿಗೆಲ್ಲ ಬೇರೆ ಯಾರೂ ಕೇಳುಗರಿಲ್ಲ. ತೊಟ್ಟಿಲಲ್ಲಿ ಹೊರಳಾಡುತ್ತಿರುವ ತನ್ನ ಮಗುವಿಗಾಗಿ ಮಾತ್ರ ಅಮ್ಮ ಜೋಗುಳ ಹಾಡುವಂತೆ ಈ ಸುಮಧುರವಾಹಿನಿಯನ್ನು ನನ್ನೊಬ್ಬನಿಗೇ ಲತಾ ಹಾಡುತ್ತಿದ್ದಾಳೆ ಎಂದೆನಿಸಿ ಖುಷಿಯಾಗಿ ಎದೆ ಹೆಮ್ಮೆಯಿಂದ ಉಬ್ಬುತ್ತದೆ, ಮತ್ತು ನಿಮ್ಮೊಂದಿಗೆ ಆ ಖುಷಿಯನ್ನು ಆ ಕೂಡಲೇ ಹಂಚಿಕೊಳ್ಳಬೇಕೆಂಬ ಮನಸಾಗುತ್ತದೆ!

ಅಷ್ಟೇ! ಹಾಗಾಗಿ ಇಂತಹ ಬೆಚ್ಚನೊಚ್ಚಗಿನ ಬಿಸಿಲುಮಳೆಯ ದಿನದ ಬೆಳ್ಳಂಬೆಳಗ್ಗೆಯೇ ಆಕಳಿಸುವಂತೆ ಮಾಡ್ತಾ ಇದೀನಿ ಅಂತಾ ಬೇಜಾರು ಮಾಡ್ಕೋಬೇಡಿ ಮತ್ತೆ.

**ಹ್ಯಾವ್ ಎ ನೈಸ್ ಡೇ!**

**ಶಿವಕುಮಾರ ಕೆ. ಎಸ್. ks_shivu@yahoo.com**